**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎ.ಶರವಣ ಇವರು ನಿಯಮ 72ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಕರ್ನಾಟಕ ಸರ್ಕಾರದ ಮುಜರಾಯಿ ಹಾಗೂ ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿ ಬರುವ ಆಂಧ್ರ ಪ್ರದೇಶದ ತಿರುಮಲದಲ್ಲಿ ನಿರ್ಮಿಸಲಾಗಿರುವ ಕರ್ನಾಟಕ ಭವನದ ನೂತನ ಕಟ್ಟಡ ನಿರ್ಮಾಣ ಕಾಮಗಾರಿಯು ಕಳಪೆ ಗುಣಮಟ್ಟದಿಂದ ಕೂಡಿರುವುದರಿಂದ ಭಕ್ತಾಧಿಗಳಿಗೆ ತೊಂದರೆಯಾಗಿ ಕರ್ನಾಟಕ ರಾಜ್ಯದ ಮುಜರಾಯಿ ಮತ್ತು ಧಾರ್ಮಿಕ ದತ್ತಿ ಇಲಾಖೆಯ ಕುರಿತು ಜನಸಾಮಾನ್ಯರಲ್ಲಿ ಅಸಮಾಧಾನವಿರುವ ವಿಷಯದ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಗಮನ ಸೆಳೆದಿರುತ್ತಾರೆ.**

**ಉತ್ತರ:**

ಆಂಧ್ರಪ್ರದೇಶದ ತಿರುಮಲದಲ್ಲಿನ ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ 7.05 ಎಕರೆ ಜಾಗದಲ್ಲಿ ವಸತಿ ಗೃಹ, ಕಲ್ಯಾಣ ಮಂಟಪ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ರೂ.200.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಅತಿಥಿಗೃಹ, ಕಲ್ಯಾಣ ಮಂಟಪ ನಿರ್ಮಾಣ ಮತ್ತು ಇತರೆ ಸೌಲಭ್ಯಗಳನ್ನು ಕಲ್ಪಿಸುವ ಕಾಮಗಾರಿಗಳನ್ನು ಕೈಗೊಳ್ಳಲು, ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಬೋರ್ಡ್‌ನವರಿಗೆ ವಹಿಸಿ, ಇದಕ್ಕೆ ತಗಲುವ ಯೋಜನೆಯ ಅನುದಾನವನ್ನು ಟಿ.ಟಿ.ಡಿ. ಬೋರ್ಡ್‌ಗೆ ನೀಡಲು ಸರ್ಕಾರದ ಆದೇಶ ಸಂಖ್ಯೆ: ಕಂಇ 07 ಮುಅಕಾ 2020 ದಿನಾಂಕ:30.06.2020ರಲ್ಲಿ ಆದೇಶಿಸಲಾಗಿರುತ್ತದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ ಕಂಇ 07 ಮುಅಕಾ 2020 ದಿನಾಂಕ:16.10.2020 ರಲ್ಲಿ ರೂ.100.00 ಕೋಟಿಗಳು ಮತ್ತು ಸರ್ಕಾರದ ಆದೇಶ ಸಂ:ಕಂಇ 270 ಮುಅಬಿ 2022 ದಿನಾಂಕ:12.07.2022 ರಲ್ಲಿ ರೂ.102.00 ಕೋಟಿಗಳು ಸೇರಿ ಒಟ್ಟು ರೂ.202.00 ಕೋಟಿಗಳನ್ನು ಪ್ರಸ್ತಾಪಿತ ಯೋಜನೆಗೆ ತಿರುಮಲ-ತಿರುಪತಿ ದೇವಾಲಯದ ಪ್ರಾಧಿಕಾರದವರಿಗೆ (ಟಿ.ಟಿ.ಡಿ) ಪಾವತಿಸಲು ಬಿಡುಗಡೆ ಮಾಡಲಾಗಿದೆ.

ಪ್ರಸ್ತಾಪಿತ ಸಮಗ್ರ ಕಾಮಗಾರಿಯ ಯೋಜನೆಯಲ್ಲಿ ನಿರ್ಮಿಸಿರುವ ಕಟ್ಟಡಗಳ ವಿವರಗಳು ಕೆಳಕಂಡಂತಿರುತ್ತದೆ.

| ಕ್ರ.ಸಂ | ಕಟ್ಟಡಗಳ ವಿವರ | ಕೊಠಡಿಗಳ ವಿವರ | ಷರಾ |
|---|---|---|---|
| (1) | ಹಳೇಬೀಡು (ಕೆಪಿಎಸ್ ನವೀಕರಣ) | 86 ಕೊಠಡಿಗಳು | ಪ್ರಸ್ತಾಪಿತ ಕಟ್ಟಡದಲ್ಲಿ ಭಾಗಶಃ ದುರಸ್ಥಿ/ನವೀಕರಣ ಕಾಮಗಾರಿಗಳು ಬಾಕಿ ಇದ್ದು ಪ್ರಸ್ತುತ ಪ್ರಗತಿಯಲ್ಲಿರುತ್ತದೆ. |
| (2) | ಹಂಪಿ ಬ್ಲಾಕ್ | 110 A/C ಕೊಠಡಿಗಳು | **ದಿನಾಂಕ: 04.03.2024ರಂದು ಉದ್ಘಾಟನೆಗೊಂಡಿದ್ದು**, ಯಾತ್ರಾರ್ಥಿಗಳ ವಾಸ್ತವ್ಯಕ್ಕಾಗಿ ಕೊಠಡಿಗಳನ್ನು ನೀಡಲಾಗುತ್ತಿದೆ |
| (3) | ಐಹೊಳೆ ಬ್ಲಾಕ್ | 132 Non A/C ಕೊಠಡಿಗಳು ಮತ್ತು 12 ಡಾರ್ಮೆಂಟರಿ | **ದಿನಾಂಕ: 20.01.2025ರಂದು ಉದ್ಘಾಟನೆಗೊಂಡಿದ್ದು**, ಯಾತ್ರಾರ್ಥಿಗಳ ವಾಸ್ತವ್ಯಕ್ಕಾಗಿ ಕೊಠಡಿಗಳನ್ನು ನೀಡಲಾಗುತ್ತಿದೆ |
| (4) | ಶ್ರೀ ಕೃಷ್ಣದೇವರಾಯ ಬ್ಲಾಕ್ | 36 VVIP ಕೊಠಡಿಗಳ | ಕಟ್ಟಡದ ಕಾಮಗಾರಿಯು **ಮುಕ್ತಾಯ ಹಂತದಲ್ಲಿರುತ್ತದೆ.** |
| (5) | ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಕಲ್ಯಾಣ ಮಂಟಪ | ಕಲ್ಯಾಣ ಮಂಟಪದ ಹಾಲ್‌ನಲ್ಲಿ 500 ಮತ್ತು ಡೈನಿಂಗ್ ಹಾಲ್ ನಲ್ಲಿ 500 ಆಸನಗಳು ಸೇರಿ ಒಟ್ಟು 1000 ಆಸನಗಳ ಸಾಮರ್ಥ್ಯವಿರುತ್ತದೆ | **ದಿನಾಂಕ: 23.06.2025ರಂದು ಉದ್ಘಾಟನೆಯಾಗಿದೆ.** |

ಸರ್ಕಾರದ ಆದೇಶ ಸಂಖ್ಯೆ : ಲೋಇ 11 ಬಿಜಿಎಂ 2024 ದಿನಾಂಕ: 13.02.2024 ರಲ್ಲಿ ಹಂಪಿ ಬ್ಲಾಕ್ (ಬ್ಲಾಕ್ -2) ಮತ್ತು ಸರ್ಕಾರದ ಆದೇಶ ಸಂಖ್ಯೆ : ಲೋಇ 11 ಬಿಜಿಎಂ 2024 ದಿನಾಂಕ: 20.11.2024ರಲ್ಲಿ ಐಹೊಳೆ ಬ್ಲಾಕ್ (ಬ್ಲಾಕ್ -1) ಕಟ್ಟಡದ ಕಾಮಗಾರಿಯನ್ನು ಭೌತಿಕ ಹಾಗೂ ತಾಂತ್ರಿಕವಾಗಿ ಪರಿಶೀಲನೆ ಮಾಡಿ ವರದಿ ನೀಡಲು ಲೋಕೋಪಯೋಗಿ ಇಲಾಖೆಯ, ಮುಖ್ಯ ಇಂಜನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಮುಖ್ಯ ಇಂಜನೀಯರ್, ಗುಣ ಭರವಸೆ, ಮುಖ್ಯ ವಾಸ್ತು ಶಿಲ್ಪಿಗಾರರು, ಅಧೀಕ್ಷಕ ಇಂಜನಿಯರ್ ಮತ್ತು ಕಾರ್ಯಪಾಲಕ ಇಂಜನಿಯರ್ ಅಧಿಕಾರಿಗಳನ್ನೊಳಗೊಂಡ ತಾಂತ್ರಿಕ ತಂಡವನ್ನು ರಚಿಸಿ ಆದೇಶಸಲಾಗಿರುತ್ತದೆ.

ಲೋಕೋಪಯೋಗಿ ಇಲಾಖಾ ಗುಣ ಭರವಸೆ, ವಾಸ್ತು ಶಿಲ್ಪಿಗಾರರು ಮತ್ತು ವಿದ್ಯುತ್ ಅಧಿಕಾರಿಗಳನ್ನೊಳಗೊಂಡ ಸದರಿ ತಾಂತ್ರಿಕ ತಂಡವು, ಕಾಮಗಾರಿಯನ್ನು ನಿರ್ವಹಿಸುತ್ತಿರುವ ತಿರುಮಲ-ತಿರುಪತಿ ದೇವಾಲಯದ ಅಧಿಕಾರಿಗಳೊಂದಿಗೆ ಪ್ರಸ್ತಾಪಿತ ಯೋಜನೆಯ ಕಾಮಗಾರಿಯನ್ನು ಜಂಟಿಯಾಗಿ ಪರಿಶೀಲಿಸಿ, ಸಲ್ಲಿಸಿರುವ ವರದಿಯ ಆಧಾರದ ಮೇರೆಗೆ, ಪ್ರಸ್ತಾಪಿತ ಕಟ್ಟಡಗಳನ್ನು ಕರ್ನಾಟಕ ರಾಜ್ಯ ಛತ್ರದ ವಶಕ್ಕೆ ಪಡೆದು, ಯಾತ್ರಾರ್ಥಿಗಳ ಅನುಕೂಲದ ಹಿತದೃಷ್ಟಿಯಿಂದ ಆನ್ ಲೈನ್ (ಶೇ: 60)ಮತ್ತು ಆಫ್ ಲೈನ್ (ಶೇ. 40) ಮೂಲಕ ಹಂಚಿಕೆ ಮಾಡಲಾಗುತ್ತಿದೆ.

ಲೋಕೋಪಯೋಗಿ ಇಲಾಖೆಯ ಪರಿಶೀಲನಾ ತಂಡವು ನೀಡಿರುವ ಪರಿಶೀಲನಾ ವರದಿಯಲ್ಲಿ ಹಂಪಿ ಬ್ಲಾಕ್ (ಬ್ಲಾಕ್-2) ಮತ್ತು ಐಹೊಳೆ ಬ್ಲಾಕ್ (ಬ್ಲಾಕ್-1) ಕಟ್ಟಡದ ಕಾಮಗಾರಿಯಲ್ಲಿ ಲಿಫ್ಟ್‌ನ ಮುಂಭಾಗದಲ್ಲಿ ನೀರು ಸೋರುವಿಕೆ, ಕೋಣೆಗಳಲ್ಲಿ ನೀರು ಸೋರಿ ಒದ್ದೆಯಾಗಿರುವುದು, ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು, ಮಳೆ ನೀರು ಕೊಯಿಲಿಗೆ ಅವಕಾಶ ಕಲ್ಪಿಸುವುದು, ಇತ್ಯಾದಿ ನ್ಯೂನ್ಯತೆಗಳನ್ನು ಪಟ್ಟಿಮಾಡಿ ಸರಿಪಡಿಸಲು ತಿಳಿಸಿರುತ್ತಾರೆ.

ಅಲ್ಲದೇ, ವಸತಿ ಸಂಕೀರ್ಣಗಳ ಕೆಲವು ಕೊಠಡಿಗಳು ಹಾಗೂ ಆವರಣಗಳಲ್ಲಿ ಮಳೆಯಿಂದಾಗಿ ನೀರು ಸೋರಿಕೆಯಾಗುತ್ತಿರುವುದಲ್ಲದೆ, ಮುಖ್ಯ ದ್ವಾರದ ಮುಂಭಾಗದಲ್ಲಿನ ಮೇಲ್ಛಾವಣಿಗಳ ಪಿಒಪಿ ಕಳಚಿ ಬಿದ್ದಿದ್ದು, ಈ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಲು ತಿರುಮಲ ತಿರುಪತಿ ದೇವಸ್ಥಾನದ ಸಂಬಂಧಪಟ್ಟ ಇಂಜಿನಿಯರಿಂಗ್ ವಿಭಾಗವನ್ನು ಕೋರಲಾಗಿರುತ್ತದೆ.

ಸದರಿ ಕಾಮಗಾರಿಗಳ ಕೆಲಸವು ಮುಕ್ತಾಯದ ಹಂತದಲ್ಲಿದ್ದು, ಬಹುಶಃ ಮಾರ್ಚ್ 2026ರ ತಿಂಗಳ ಅಂತ್ಯಕ್ಕೆ ಸಂಪೂರ್ಣವಾಗಿ ಟಿಟಿಡಿ ಸಂಸ್ಥೆಯವರು ಕರ್ನಾಟಕ ರಾಜ್ಯಕ್ಕೆ ಹಸ್ತಾಂತರಿಸುತ್ತಾರೆ.

**ಪ್ರಸ್ತುತ ಅಭಿವೃದ್ಧಿ ಯೋಜನೆಯ ಟೆಂಡರ್ ನಿಯಮಾವಳಿ ಪ್ರಕಾರ DEFAULT LIABILITY PERIOD 05 ವರ್ಷದ ಅವಧಿಗೆ ಇರುತ್ತದೆ. ಆದುದರಿಂದ ಯಾವುದೇ ನ್ಯೂನತೆಗಳಿದ್ದರೂ ಟಿಟಿಡಿ ಇಂಜಿನಿಯರಿಂಗ್ ವಿಭಾಗದವರೇ ಮಾಡಬೇಕಾಗಿದ್ದು, ಕಾಲಕಾಲಕ್ಕೆ ನ್ಯೂನತೆಗಳನ್ನು ಸರಿಪಡಿಸಲು ಕೋರಲಾಗುತ್ತಿದೆ. ಸದರಿ ನ್ಯೂನತೆಗಳನ್ನು ಟಿಟಿಡಿ ಇಂಜಿನಿಯರಿಂಗ್ ವಿಭಾಗದವರು ಸರಿಪಡಿಸುತ್ತಾ ಬಂದಿರುತ್ತಾರೆ. ಮುಂದುವರೆದು ಪಿಒಪಿ ಕಳಚಿರುವ ಬಗ್ಗೆ ತಾಂತ್ರಿಕ ಸಮಿತಿ ಅಭಿಪ್ರಾಯವನ್ನು ಪಡೆದು ಎಲ್ಲಾ ಕೊಠಡಿಗಳ ಪಿಒಪಿ ಗಳನ್ನು ತೆಗೆದುಹಾಕಿ ಪಿವಿಸಿ ಶೀಟ್‌ಗಳನ್ನು ದಿನಾಂಕ: 11.12.2025 ರಿಂದ ಬದಲಾಯಿಸುತ್ತಿದ್ದು, ಕಾಮಗಾರಿಯನ್ನು 02 ತಿಂಗಳೊಳಗೆ ಪೂರ್ಣಗೊಳಿಸಲಿದ್ದಾರೆ ಹಾಗೂ ಇತ್ತೀಚಿನ ಸೈಕ್ಲೋನ್ ನಿಂದಾಗಿ ಮೇಲ್ಛಾವಣಿಗಳ ಲೀಕೇಜ್ ಬಗ್ಗೆ ಹಂತ ಹಂತವಾಗಿ LEAKAGE ARREST ಮಾಡಲು ಪ್ರಾರಂಭಿಸಿರುತ್ತಾರೆ.**

ಸಂಖ್ಯೆ: ಕಂಇ 245 ಮುಸಪ್ರ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು